ವಿಷಯ ಅರ್ಥವಾಗಿ ನಮ್ಮವನ ಅಂಗಾಂಗ ಕದ್ದ ಆ ಬೆಹೆನ್ ಚೋದ್‌ನನ್ನು ಸುಮ್ಮನೆ ಬಿಡಬಾರದು. ಆ ಆಸ್ಪತ್ರೆಗೆ ಬೆಂಕಿ ಇಟ್ಟು ಅವನ್ನು ಜೀವಂತ ದಹಿಸಿಬಿಡೋಣ ಎಂಬ ಮಾತುಗಳು ಕೇಳಿ ಬಂದವು.

ಎಂಎಲ್‌ಎಯ ಮಾತುಗಳನ್ನು ಫೋನಿನಲ್ಲಿ ಕೇಳಿಸಿಕೊಂಡ ವೈದ್ಯಾಧಿಕಾರಿ ಥರಥರ ನಡುಗಿ ನಿಮ್ಮ ಕಾಲಿಗೆ ಬೀಳುತ್ತೇನೆ ಸಾಹೇಬರೇ ಇದು ನನ್ನ ಗಮನಕ್ಕೆ ಬಂದೇ ಇಲ್ಲ. ಸ್ವಯಂ ಹೆಣವನ್ನು ನಾನು ನೋಡದೆ ಏನನ್ನೂ ಹೇಳುವಂತಿಲ್ಲ ಎಂದಿದ್ದಕ್ಕೆ ನೀನು ಬಂದರೆ ಜಮಾತಿನವರು ಜೀವಂತ ಹೂತು ಬಿಡುತ್ತಾರೆ ಬೇಕೂಫ್ ಕುತ್ತೇ. ನಾನೇ ನಿನ್ನಲ್ಲಿಗೆ ಬರುತ್ತೇವೆ. ಕದ್ದ ಅಂಗಾಂಗ ಮರ್ಯಾದೆಯಿಂದ ಕೊಟ್ಟು ಬಿಡು ಎಂದು ಅಬ್ಬರಿಸಿದ. ಯಾವುದಕ್ಕೂ ಸಾಹೇಬರೇ ನೀವು ಇನ್ನೊಮ್ಮೆ ಹೆಣವನ್ನು ಸರಿಯಾಗಿ ಪರೀಕ್ಷಿಸಿ ನೋಡಿ, ಇನ್ನೇನಾದರೂ ಅಂಗ ತೆಗೆದಿದ್ದಾರೆಯೇ ಅಂತ ತಿಳಿಸಿ, ನಾನು ಆಸ್ಪತ್ರೆಯಲ್ಲಿ ಎನ್‌ಕ್ವಯರಿ ನಡೆಸಿ ಕಲ್‌ಪ್ರಿಟ್‌ನನ್ನು ಹಿಡಿದುಕೊಡುತ್ತೇನೆ. ನನ್ನ ಮೇಲೆ ಏನೂ ಆ್ಯಕ್ಷನ್ ತಗೋಬೇಡಿ ಎಂದು ಗೋಗರೆದು ಸಂಜೆ ಮಾಮೂಲಿ ಜಾಗದಲ್ಲಿ ಸಿಗುತ್ತೇನೆ ಎಂದ ಮೇಲೆ ಎಂಎಲ್‌ಎ ತಣ್ಣಗಾದ.

ಇಷ್ಟರವರೆಗೆ ಎಲ್ಲವನ್ನೂ ನೋಡುತ್ತಾ ಸುಮ್ಮನೆ ನಿಂತಿದ್ದ ಇನ್‌ಸ್ಪೆಕ್ಟರನಿಗೆ ಒಮ್ಮೆಲೇ ಏನೋ ಹೊಳೆದು ಜ್ಞಾನೋದಯವಾದಂತಾಗಿ ಅವನು ಹೆಣದ ಬಳಿಗೆ ಬಂದ. ಮತ ಪಂಡಿತ ಮತ್ತು ಎಂಎಲ್‌ಎ ಕಿವಿಗಳಲ್ಲಿ ಏನೋ ಪಿಸುಗುಟ್ಟಿದ. ಅವರಿಬ್ಬರೂ ಆಯಿತು, ಆಯಿತು ನೀವೇ ನೋಡಿ ಬಿಡಿ ಎಂದಾಗ ತನ್ನ ಲಾಠಿಯಿಂದ ಹೆಣದ ಶಿಶ್ನವನ್ನು ಮೇಲಕ್ಕೆ ಎತ್ತಿ ನೋಡಿದ. ಮತ ಪಂಡಿತ ಮತ್ತು ಎಂಎಲ್‌ಎ ಮೊದಲು ಶಿಶ್ನವನ್ನು ನೋಡಿದರು. ಆಮೇಲೆ ಮುಖಾ ಮುಖಿ ನೋಡಿಕೊಂಡರು. ಹೌದು ಅದು ಸುನ್ನತಿಯಾಗದ ಶಿಶ್ನ! ಅಂದರೆ ಸತ್ತವನು ತಮ್ಮವನಲ್ಲ. ತನ್ನೆಲ್ಲಾ ತಲೆನೋವು ನಿವಾರಣೆಯಾದಂತೆನಿಸಿ ಎಂಎಲ್‌ಎ ಗಟ್ಟಿಯಾಗಿ ಬೊಬ್ಬಿಟ್ಟ. ಇವನು ಅವನಲ್ಲ. ಇವನಿಗೆ ಸುನ್ನತಿ ಆಗಿಲ್ಲ.

ಜಮಾತಿನವರು ನಿಟ್ಟುಸಿರು ಬಿಟ್ಟು ಯಾ ಅಲ್ಲಾ ಎಂದು ದೇವರಿಗೆ ಕೃತಜ್ಞತೆ ಅರ್ಪಿಸಿದರು. ಈಗ ಅವರಿಗೆ ಕೆಳಗೆ ಬಿದ್ದಿದ್ದ ಅವಳ ನೆನಪಾಯಿತು. ಅವಳನ್ನು ಎಬ್ಬಿಸಿ ಈ ಸಂತೋಷದ ವಾರ್ತೆ ತಿಳಿಸಲು ಇನ್ನಿಲ್ಲದ ಯತ್ನ ಮಾಡಿದರು. ಅವಳ ದೇಹ ನಿಶ್ಚಲವಾಗಿತ್ತು.


**ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಇದುವರೆಗೆ 42 ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಮಹಾಭಾರತವನ್ನು ಆಧಾರಿಸಿ ಇವರು ರಚಿಸಿದ 'ಪುಂಸ್ತ್ರೀ' 12 ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.